**SC No. 110/2017**
**PW-40**

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,**

**ಮೈಸೂರು.**

**ಎಸ್. ಸಿ.** 110/2017

| | | |
|---|---|---|
| ಸಾಕ್ಷಿದಾರರ ಹೆಸರು | ಉಮಾಶಂಕರ | ಪ್ರಮಾಣ ವಚನ ಮಾಡಿದ ದಿನಾಂಕ: 10.12.2025 |
| ತಂದೆಯ/ಗಂಡನ ಹೆಸರು | ಚಂದ್ರನಾಯ್ಕ | |
| ವಯಸ್ಸು | 56 ವರ್ಷ | |
| ವೃತ್ತಿ | Mechanic mail motor service, ಅಂಚೆ ಕಛೇರಿ, ವಿವಿ ಮೊಹಲ್ಲಾ | ಫ್ರಾ.ಸಾಃ 40 |
| ವಾಸ ಸ್ಥಳ | ಮೈಸೂರು | ಚಾ.ಸಾಃ 62 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ಕಳೆದ 35 ವರ್ಷಗಳಿಂದ Mechanic mail motor service ಅಂಚೆ ಕಛೇರಿ, ವಿವಿ ಮೊಹಲ್ಲಾ ದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನಗೆ ಚಾಸಾ-63 ಗೊತ್ತು. ಅವರು ವಿವಿ ಮೊಹಲ್ಲಾದ ಅಂಚೆ ಕಛೇರಿಯಲ್ಲಿ ಪೋಸ್ಟ್ ಮ್ಯಾನ್ ಆಗಿ ಕೆಲಸ ಮಾಡುತ್ತಿರುತ್ತಾರೆ. ನನ್ನ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ಮಹಜರ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-131 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-131(ಎ) ಎಂದು ಗುರುತಿಸಲಾಯಿತು.

ಈಗ್ಗೆ 8 ವರ್ಷಗಳ ಹಿಂದೆ ನಿಪಿ-131 ಕ್ಕೆ ಸಹಿ ಮಾಡಿದ್ದೆ. ನಾನು ಆ ದಿನ ವಿವಿ ಮೊಹಲ್ಲಾದ ಅಂಚೆ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದೆ. ನಮ್ಮ ಕಛೇರಿಗೆ ಪೊಲೀಸರು ಬಂದಿದ್ದರು

ಅಧೀಕ್ಷಕರ  ಅನುಮತಿಯ ಮೇರೆಗೆ ನನ್ನನ್ನು ಮತ್ತು ಚಾಸಾ-63 ರವರನ್ನು ಆರಕ್ಷಕ ಠಾಣೆಗೆ ಕರೆದುಕೊಂಡು ಹೋಗಿದ್ದರು. ಪೊಲೀಸ್ ಠಾಣೆಯಲ್ಲಿ ನಮಗೆ ಮಾಹಿತಿ ಕೊಟ್ಟಿದ್ದರು ಮತ್ತು ಕೇಂದ್ರ ಕಾರಗೃಹಕ್ಕೆ ಹೋಗಬೇಕು ಅಲ್ಲಿ ಮೊಬೈಲ್ ಮತ್ತು ಸಿಮ್ ಅನ್ನು ಚೆಕ್ ಮಾಡಬೇಕು ಜೊತೆಯಲ್ಲಿ ಬರಬೇಕು ಎಂದು ಹೇಳಿದ್ದರು. ಪೊಲೀಸ್ ಠಾಣೆಯಲ್ಲಿ ಸಿಬ್ಬಂದಿಗಳು ಇದ್ದರು ಅವರನ್ನು ಹೊರತುಪಡಿಸಿ ಬೇರೆ ಇಬ್ಬರನ್ನು ಕೂಡಿಸಿಕೊಂಡಿದ್ದರು. ಅವರ ಹೆಸರುಗಳನ್ನು ಹೇಳಿದ್ದರು. ಅವರುಗಳೆಂದರೆ ಮಂಜೇಶ್ ಮತ್ತು ಶ್ರೀನಿವಾಸ್ ಅಂತ ಹೇಳಿದ್ದರು. ನಮ್ಮನ್ನು ಅಲ್ಲಿಂದ ಜೀಪ್ ನಲ್ಲಿ ಕೇಂದ್ರ ಕಾರಗೃಹಕ್ಕೆ ಕರೆದುಕೊಂಡು ಹೋಗಿದ್ದರು. ನಾವು ಜೈಲಿನ ಹತ್ತಿರ ಹೋದಾಗ ಒಂದು ದೊಡ್ಡ ಜೀಪ್ ಬಂದಿತ್ತು ಅದರಲ್ಲಿ ಮಂಜೇಶ ಮತ್ತು ಶ್ರೀನಿವಾಸ ಇದ್ದರು. ಇನ್ಸ್ ಪೆಕ್ಟರ್ ರವರು ಜೈಲರ್ ಹತ್ತಿರ ಮಾತನಾಡಿ ನಮ್ಮನ್ನು ಒಳಗೆ ಕರೆದುಕೊಂಡು ಹೋಗಿದ್ದರು. ಮಂಜೇಶ ಮತ್ತು ಶ್ರೀನಿವಾಸ ಉಳಿದುಕೊಂಡಿದ್ದ ರೂಂನಂಬರ್ 25 ಕ್ಕೆ ನಮ್ಮನ್ನು ಕರೆದುಕೊಂಡು ಹೋಗಿ ಆ ರೂಂನಲ್ಲಿ ಇದ್ದಂತಹ ಬ್ಯಾಗುಗಳನ್ನು ಪರಿಶೀಲನೆ ಮಾಡಿದ್ದರು ಏನು ಸಿಕ್ಕಿರಲಿಲ್ಲ. ಆನಂತರ ನಮ್ಮನ್ನು ವಾಪಸ್ಸು ಠಾಣೆಗೆ ಕರೆದುಕೊಂಡು ಬಂದಿದ್ದರು ಆನಂತರ ನಮ್ಮ ಕಛೇರಿಗೆ ಕಳುಹಿಸಿಕೊಟ್ಟಿದ್ದರು. ನಾನು ಸಹಿಯನ್ನು ಪೊಲೀಸ್ ಠಾಣೆಯಲ್ಲಿ ಮಾಡಿದ್ದೆ. ನಾನು ಆ ದಿನ ನೋಡಿದ್ದ ಮಂಜೇಶ ಮತ್ತು ಶ್ರೀನಿವಾಸ ಇವರುಗಳನ್ನು ಈಗ ನೋಡಿದರೆ ಗುರುತಿಸಲು ಆಗುವುದಿಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ತೆಗೆದುಕೊಂಡಿರುವುದಿಲ್ಲ.

**ಈ ಹಂತದಲ್ಲಿ , ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:</u>**

ಜೈಲಿನಲ್ಲಿ ಪೊಲೀಸರು ಪರಿಶೀಲನೆ ಮಾಡಿ ಏನು ಸಿಗದೇ ಇದ್ದುದರಿಂದ ಅಲ್ಲಿಯೇ ನಿಪಿ-131 ರ ಪ್ರಕಾರ ಪಂಚನಾಮೆಯನ್ನು ಮಾಡಿದ್ದು ಅಲ್ಲಿಯೇ ನನ್ನ ಸಹಿ ತೆಗೆದುಕೊಂಡಿದ್ದರು ಎಂದರೆ ಬಹಳ ವರ್ಷ ಆಗಿರುವುದರಿಂದ ನನಗೆ ನೆನಪಲ್ಲಿ ಇರುವುದಿಲ್ಲ. ನಾನು ಈಗ ವಿಸಿ ಮೂಲಕ ನೋಡುತ್ತಿರುವ ವ್ಯಕ್ತಿ 10 ನೇ ಆರೋಪಿ ಮಂಜೇಶ ಇರುತ್ತಾನೆ ಎಂದರೆ ನನಗೆ ಗುರುತಿಸಲು ಆಗುವುದಿಲ್ಲ. ನಾನು ನಿಪಿ-131 ಕ್ಕೆ ಜೈಲಿನಲ್ಲಿ ಸಹಿ ಹಾಕಿದ್ದು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆ ದಿನ ನೋಡಿದ್ದೆ ಎಂದು ಹೇಳುವ ಆರೋಪಿ ವಿಸಿ ಮೂಲಕ ಹಾಜರುಪಡಿಸಿರುವ 10 ನೇ ಆರೋಪಿ ಮಂಜೇಶ ರವರನ್ನು ಗುರುತಿಸಲು ನನಗೆ ಸಾಧ್ಯ ಇದ್ದರೂ ಸಹ ಬಹಳ ದಿವಸ ಆಗಿರುವುದರಿಂದ ನನಗೆ ಗುರುತಿಸಲು ಆಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

***( ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶವನ್ನು ನೀಡಿ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.)***

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು,ಮೈಸೂರು.**